

# ಬ್ರಿಟಿಷ್ ಸುಂದರಿಯರ ಕಾರುಬಾರು



ಅಲಿಯಾ ಭಟ್ ಸಂತೋಷಕ್ಕೆ ಪಾರವೇ ಇಲ್ಲ. ನ್ಯೂಯಾರ್ಕ್‌ನಲ್ಲಿ ಜುಲೈ 13ರಿಂದ ಮೂರು ದಿನಗಳ ಕಾಲ ನಡೆಯಲಿರುವ 'ಐಫಾ 2017'ರಲ್ಲಿ ಇದೇ ಮೊದಲ ಬಾರಿಗೆ ಅಲಿಯಾಗೆ ವೇದಿಕೆಯ ಮೇಲೆ ಕುಣಿಯಲು ಅವಕಾಶ ಸಿಕ್ಕಿದೆ. ಬಾಲಿವುಡ್‌ಗೆ ಅಡಿಯಿಟ್ಟು ಕೇವಲ ನಾಲ್ಕು ವರ್ಷವಷ್ಟೇ ಆಗಿರುವ, ಇನ್ನೂ 24ರ ಹರೆಯದ ಅಲಿಯಾ 'ಇಷ್ಟೊಂದು ಬೇಗ ನನಗೆ ಇಂತಹ ಪ್ರತಿಷ್ಠಿತ ಸಮಾರಂಭದಲ್ಲಿ ಕುಣಿತದ ಅವಕಾಶ ಸಿಗುತ್ತದೆಂದು ಭಾವಿಸಿರಲಿಲ್ಲ' ಎಂದಿದ್ದಾಳೆ. ಕೇವಲ ಕುಣಿತ ಮಾತ್ರವಲ್ಲ, 'ಅತ್ಯುತ್ತಮ ನಟಿ' ಐಫಾ ಪ್ರಶಸ್ತಿಗೂ ಅಲಿಯಾ ಹೆಸರು ನಾಮಕರಣಗೊಂಡಿದೆ. ಅದು ಎರಡು ಸಿನಿಮಾಗಳಲ್ಲಿ– 'ಡಿಯರ್ ಝಿಂದಗಿ' ಮತ್ತು 'ಉಡ್ತಾ ಪಂಜಾಬ್' ಎರಡೂ ಚಿತ್ರಗಳ ನಟನೆ ಯಲ್ಲಿ ಒಂದಂತೂ ಆಕೆಗೆ ಅತ್ಯುತ್ತಮ ನಟಿ ಪ್ರಶಸ್ತಿ ತಂದುಕೊಡುವ ನಿರೀಕ್ಷೆ ಹುಟ್ಟಿಸಿದೆ.

'ಪ್ರಶಸ್ತಿಗಿಂತ ಹೆಚ್ಚಾಗಿ ಅಲ್ಲಿ ವೇದಿಕೆಯ ಮೇಲೆ ಕುಣಿತದ ಅವಕಾಶ ಸಿಕ್ಕಿರುವುದೇ ನನಗೆ ಹೆಚ್ಚು ಥ್ರಿಲ್ ನೀಡಿದೆ' ಎಂದಿದ್ದಾಳೆ ಅಲಿಯಾ. ಐಫಾ ಸಮಾರಂಭದಲ್ಲಿ ಸಲ್ಮಾನ್ ಖಾನ್ ಮತ್ತು ಕತ್ರೀನಾ ಕೈಫ್ ಜತೆಗೆ ಕುಣಿಯುವ ಅವಕಾಶ ಆಕೆಯ ಉತ್ಸಾಹವನ್ನು ಇಮ್ಮಡಿಸಿದೆಯಂತೆ. ನ್ಯೂಯಾರ್ಕ್‌ನ ಸ್ಟೇಡಿಯಂನಲ್ಲಿ 40 ಸಾವಿರ ಪ್ರೇಕ್ಷಕರು ಸೇರಲಿದ್ದಾರಂತೆ.

ಕತ್ರೀನಾ ಮತ್ತು ಅಲಿಯಾ ಇಬ್ಬರೂ ಬ್ರಿಟಿಷ್ ಮೂಲದ ನಟಿಯರು. ಇಬ್ಬರೂ ಸದ್ಯಕ್ಕೇ ಬಾಲಿವುಡ್‌ನಲ್ಲಿ ಅತ್ಯಂತ ಬ್ಯುಸಿ. ಅಲಿಯಾ ಜುಲೈನಲ್ಲಿ ಮೇಘನಾ ಗುಲ್ಜಾರ್ ನಿರ್ದೇಶನದ ಹೊಸ ಚಿತ್ರವೊಂದರಲ್ಲಿ ನಟಿಸಲು ಒಪ್ಪಿಕೊಂಡಿದ್ದಾಳೆ. 'ನನ್ನ ವೃತ್ತಿಜೀವನದಲ್ಲೇ ಅತ್ಯುತ್ತಮ ಎನ್ನಬಹುದಾದ ಪಾತ್ರವಿದು' ಎಂದಿದ್ದಾಳೆ ಆಕೆ. ಕಾಶ್ಮೀರಿ ಹುಡುಗಿಯೊಬ್ಬಳು ಪಾಕಿಸ್ತಾನದ ಸೇನಾ ಅಧಿಕಾರಿಯನ್ನು ಮದುವೆಯಾಗಿ ಭಾರತದ ಪರ ಗೂಢಚರ್ಯೆ ಮಾಡುವ ಪಾತ್ರ. 1971ರ ಭಾರತ– ಪಾಕ್ ಯುದ್ಧದ ಹಿನ್ನೆಲೆಯ ಚಿತ್ರವಿದಂತೆ. 'ಕಾಲಿಂಗ್ ಸೆಹಮತ್' ಎನ್ನುವ ಕಾದಂಬರಿ ಆಧಾರಿತ.

ಇದೇ ರೀತಿಯ ಕಥೆಯಿದ್ದ ಸಲ್ಮಾನ್– ಕತ್ರೀನಾ ಅಭಿನಯದ 'ಏಕ್ ಥಾ ಟೈಗರ್' 2012ರಲ್ಲಿ ಬಾಕ್ಸಾಫೀಸ್ ದಾಖಲೆಗಳನ್ನೆಲ್ಲ ಪುಡಿಗಟ್ಟಿತ್ತು. ಈಗ ಅದರ ಎರಡನೇ ಭಾಗ 'ಟೈಗರ್ ಝಿಂದಾ ಹೈ' ಚಿತ್ರೀಕರಣಕ್ಕೆ ಸಿದ್ಧತೆ ನಡೆದಿದೆ. ಅದರಲ್ಲಿ ಕತ್ರೀನಾ ಮತ್ತೆ ನಾಯಕಿ.

ಅಲಿಯಾ ಭಟ್ ಅಯಾನ್ ಮುಖರ್ಜಿಯ 'ಡ್ರ್ಯಾಗನ್' ಮತ್ತು ಜೋಯಾ ಅಖ್ತರ್‌ಳ 'ಗಲ್ಲಿ ಬಾಯ್' ಚಿತ್ರಗಳಲ್ಲೂ ನಾಯಕಿ. ಎರಡರಲ್ಲೂ ರಣಬೀರ್ ನಾಯಕ. ಕತ್ರೀನಾ ಕೂಡಾ 2018ರವರೆಗೂ ಒಟ್ಟು ಏಳು ಚಿತ್ರಗಳನ್ನು ಒಪ್ಪಿಕೊಂಡಿದ್ದಾಳೆ. ಬಾಲಿವುಡ್‌ನಲ್ಲೀಗ ಈ ಇಬ್ಬರೂ ಬ್ರಿಟಿಷ್ ಸುಂದರಿಯರ ಕಾರುಬಾರು ಜೋರಾಗಿದೆ.

■ ಬಿಂದು